# ಇಳೆಗಿಳಿದ ಗಂಧರ್ವ

# ಇಳಯರಾಜ

**ಸಾವಿರಾರು ಹಾಡುಗಳ ಸರದಾರ ಎನಿಸಿರುವ ಚಿತ್ರಸಂಗೀತ ನಿರ್ದೇಶಕ, ಗೀತ ರಚನೆಗಾರ, ಗಾಯಕ ಇಳಯರಾಜ ಅವರು ಚಲನಚಿತ್ರ ಜಗತ್ತಿಗೆ ಬಂದು ಐವತ್ತು ವರ್ಷಗಳಾಗಿವೆ. ಈ ಸುದೀರ್ಘ ಪಯಣದಲ್ಲಿ ಅವರು ಸಿನಿಸಂಗೀತದಲ್ಲಿ ಅಚ್ಚಳಿಯದ ಹೆಜ್ಜೆಗುರುತು ಮೂಡಿಸಿದ್ದಾರೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಮಾತಿಗೆ ಅನ್ವರ್ಥನಾಮದಂತಿದ್ದಾರೆ ಸಿನಿಮಾ ಸಂಗೀತದ 'ಗಟ್ಟಿಕುಳ' ಇಳಯರಾಜ.**





**ನಾದ ದಿಗ್ಗಜನ ಸಂಗೀತಕ್ಕೆ 50**

**■ ಉಮಾ ಅನಂತ್**

'ನಗುವ ನಯನ ಮಧುರ ಮೌನ ಮಿಡಿವ ಹೃದಯ ಇರೆ ಮಾತೇಕೆ...', 1983ರಲ್ಲಿ ಬಿಡುಗಡೆಯಾದ 'ಪಲ್ಲವಿ ಅನುಪಲ್ಲವಿ' ಕನ್ನಡ ಚಿತ್ರದ ಈ ಸೊಗಸಾದ ಹಾಡು ಕೇಳಿ ಆಸ್ವಾದಿಸಿ ಆನಂದಿಸದ ಸಹೃದಯರಿಲ್ಲ. ಇದೇ ರೀತಿ 'ಜೀವ ಹೂವಾಗಿದೆ, ಭಾವ ಜೇನಾಗಿದೆ...' 1981ರಲ್ಲಿ ಬಿಡುಗಡೆಯಾದ 'ನೀ ನನ್ನ ಗೆಲ್ಲಲಾರೆ' ಸಿನಿಮಾದ ಹಾಡು ಕೇಳಿದಷ್ಟು ಮತ್ತಷ್ಟು ಕೇಳಬೇಕೆನಿಸುವ ಜೇನಹನಿಯೇ ಆಗಿದೆ. ಎಂಬತ್ತರ ದಶಕದಲ್ಲಿ ಬಿಡುಗಡೆಯಾದ ಇವೆರಡೂ ಚಿತ್ರಗಳಲ್ಲದೆ ಇನ್ನೂ ಹಲವಾರು ಚಲನಚಿತ್ರಗಳ ಗೀತೆಗಳಿಗೆ ಸೊಗಸಾಗಿ ಸಂಗೀತ ನಿರ್ದೇಶನ ಮಾಡಿದವರು ಚಿತ್ರಸಂಗೀತ ಚಕ್ರವರ್ತಿ ಇಳಯರಾಜ.

1980, 90 ಮಾತ್ರವಲ್ಲ, 2000ರ ದಶಕದ ಆರಂಭದಲ್ಲಿಯೂ ಇಳಯರಾಜ ಅವರ ಸಂಗೀತ ಚಿತ್ರರಂಗದಲ್ಲಿ ಅಚ್ಚಳಿಯದ ಮೈಲಿಗಲ್ಲು ಸೃಷ್ಟಿಸಿದೆ. ವರ್ಷಗಳುರುಳಿದರೂ ಈ ಹಳೆಯ ಹಾಡುಗಳ ಕಂಪು ಮಾತ್ರ ಎಂದೆಂದಿಗೂ ಮಾಸುವುದಿಲ್ಲ, ಮಾಧುರ್ಯ ಜನಮಾನಸದಲ್ಲಿ ಹಚ್ಚಹಸುರಾಗಿಯೇ ಉಳಿಯುತ್ತದೆ. ಇದು ಇಳಯರಾಜ ಅವರ ಸಂಗೀತದ ವೈಶಿಷ್ಟ್ಯ.

ಇಳಯರಾಜ ಅವರು ಬರೀ ಕನ್ನಡ ಮಾತ್ರವಲ್ಲ, ತಮಿಳು, ತೆಲುಗು, ಮಲಯಾಳಂ, ಹಿಂದಿ, ಮರಾಠಿ ಭಾಷೆಗಳಲ್ಲೂ ನೂರಾರು ಹಾಡುಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಲೆಕ್ಕವಿಲ್ಲದಷ್ಟು ಹಾಡುಗಳನ್ನು ಹಾಡಿದ್ದಾರೆ.

### ಅಸಾಧಾರಣ ಸಾಧಕ

ಇಳಯರಾಜ ಅವರು 1943 ಜೂನ್ 2ರಂದು ತಮಿಳುನಾಡಿನ ಪನ್ನೈಪುರಂನಲ್ಲಿ ಜನಿಸಿದರು. ಚಿಕ್ಕ ವಯಸ್ಸಿನಿಂದಲೇ ಸಂಗೀತದತ್ತ ಆಕರ್ಷಿತರಾದ ಈ ಮಹಾನ್ ಸಾಧಕ, ಪದ್ಮಭೂಷಣ ಪುರಸ್ಕೃತರು. ಗಾಯನ, ಗೀತರಚನೆ, ಸಂಗೀತ ನಿರ್ದೇಶನ ಮೂರರಲ್ಲೂ ಅಪ್ರತಿಮ ಸಾಧನೆ ಮಾಡಿದ ಇಳಯರಾಜ ಸಿನಿಮಾ ಸಂಗೀತದಲ್ಲಿ ಕೀರ್ತಿ